**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ:DPUE-ACA0OTH/357/2025 (1947696) ದಿನಾಂಕ: 07-11-2025

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಮಾನ್ಯರೆ,

ವಿಷಯ:- ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರವರ ವತಿಯಿಂದ ನಡೆಸಲಾಗುವ 2025-26 ನೇ ಸಾಲಿನ ರೆಡ್ ಕ್ರಾಸ್ ಪರೀಕ್ಷೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಎಲ್ಲಾ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ: ಪ್ರಧಾನ ಕಾರ್ಯದರ್ಶಿ (ಪ್ರಭಾರ), ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ, ರೆಡ್ ಕ್ರಾಸ್ ಭವನ, 1 ಮಹಡಿ, ರೇಸ್‌ಕೋರ್ಸ್ ರೋಡ್, ಬೆಂಗಳೂರು560001 ಇವರ ಪತ್ರ ಸಂಖ್ಯೆ:IRCS/JRC-EXAM/727/25-26 ದಿನಾಂಕ:03-11-2025

-*-

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಒಂದು ಅಂತರರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು, ಈ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ರೆಡ್ ಕ್ರಾಸ್ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು ಮೂಡಿಸಲು ಪ್ರತಿ ವರ್ಷ ರೆಡ್ ಕ್ರಾಸ್ ಪರೀಕ್ಷೆ ನಡೆಸಲಾಗುತ್ತಿದೆ. 2025-26 ನೇ ಸಾಲಿನ ರೆಡ್ ಕ್ರಾಸ್ ಪರೀಕ್ಷೆಯನ್ನು ದಿನಾಂಕ:06/12/2025 ರಂದು (ಶನಿವಾರ) ನಿಗದಿಪಡಿಸಲಾಗಿದೆ. ಪ್ರಸ್ತುತ, ದಿನಾಂಕ:06/12/2025 ರಂದು ಶನಿವಾರ ಬೆಳಿಗ್ಗೆ 10:30 ರಿಂದ 11:30 ಗಂಟೆಯವರೆಗೆ ನಡೆಯುವ ಈ ಪರೀಕ್ಷೆಯನ್ನು ಆಯಾ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಡೆಸಲಾಗುತ್ತದೆ. ತಾವು ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಪರೀಕ್ಷೆಯಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು, ಪ್ರಧಾನ ಕಾರ್ಯದರ್ಶಿ (ಪ್ರಭಾರ), ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ದಿನಾಂಕ:06/12/2025 ರಂದು ಶನಿವಾರ ಬೆಳಿಗ್ಗೆ 10:30 ರಿಂದ 11:30 ಗಂಟೆಯವರೆಗೆ ನಡೆಯುವ 2025-26 ನೇ ಸಾಲಿನ ರೆಡ್ ಕ್ರಾಸ್ ಪರೀಕ್ಷೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಎಲ್ಲಾ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅಗತ್ಯ ಕ್ರಮವಹಿಸಲು ತಿಳಿಸಿದೆ. ಉಲ್ಲೇಖಿತ ಪತ್ರ ಹಾಗೂ ಅದರೊಂದಿಗಿನ ರೆಡ್ ಕ್ರಾಸ್ ಪರೀಕ್ಷೆಯ ಸುತ್ತೋಲೆ / ಕರ ಪತ್ರವನ್ನು ತಮಗೆ ಮಾಹಿತಿಗಾಗಿ ಲಗತ್ತಿಸಿದೆ.

Digitally signed by
Raju N
Date: 07-11-2025
17:54:06

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

**ಪ್ರತಿಯನ್ನು:**

1. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ-ಮಾಹಿತಿಗಾಗಿ.
2. ಪ್ರಧಾನ ಕಾರ್ಯದರ್ಶಿ (ಪ್ರಭಾರ), ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ, ರೆಡ್ ಕ್ರಾಸ್ ಭವನ, 1ನೇ ಮಹಡಿ, ರೇಸ್‌ಕೋರ್ಸ್ ರೋಡ್, ಬೆಂಗಳೂರು 560001- ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು (ಇ-ಆಡಳಿತ) ಇವರಿಗೆ–ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಇ-ಮೇಲ್ ಕಳುಹಿಸಲು.
4. ಕಚೇರಿ ಪ್ರತಿ.

THROUGH HUMANITY TO PEACE

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ

# Indian Red Cross Society

(CONSTITUTED UNDER PARLIAMENT ACT XV OF 1920)

KARNATAKA STATE BRANCH

100 years of minimizing, alleviating and preventing human suffering

Phone : 080-22264205, 22352127
E-mail : ircskar@gmail.com, ircskarnataka@yahoo.in
Website : www.redcrosskarnataka.org

No. IRCS /JRC-EXAM/727/25-26
Encl :

Date : 03/11/2025

E.O. 1117315
Dt. 04.11.2025

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560 012

ಮಾನ್ಯರೆ,

**ವಿಷಯ:- ಜೂನಿಯರ್ ರೆಡ್ ಕ್ರಾಸ್ ಪರೀಕ್ಷೆಯ ಕುರಿತು.**

**&&&&&&&&&&**

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಒಂದು ಅಂತರರಾಷ್ಟ್ರೀಯ ಸೇವಾ ಸಂಸ್ಥೆಯಾಗಿರುವುದು ತಮಗೆ ತಿಳಿದ ವಿಚಾರ. ಈ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯಿಂದ **ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ** ರೆಡ್ ಕ್ರಾಸ್ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು ಮೂಡಿಸಲು ಪ್ರತಿ ವರ್ಷ ರೆಡ್ ಕ್ರಾಸ್ ಪರೀಕ್ಷೆ ನಡೆಸಲಾಗುತ್ತಿದೆ.

2025-26 ನೇ ಸಾಲಿನ ರೆಡ್ ಕ್ರಾಸ್ ಪರೀಕ್ಷೆಯನ್ನು **ದಿನಾಂಕ: 06/12/2025 ರಂದು (ಶನಿವಾರ) ನಿಗದಿಪಡಿಸಲಾಗಿದೆ.**

**ದಿನಾಂಕ: 06/12/2025 ರಂದು ಶನಿವಾರ ಬೆಳಿಗ್ಗೆ 10:30 ರಿಂದ 11:30 ಗಂಟೆಯವರೆಗೆ** ನಡೆಯುವ ಈ ಪರೀಕ್ಷೆಯನ್ನು ಆಯಾಯಾ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಡೆಸಲಾಗುತ್ತದೆ. ತಾವು ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಪರೀಕ್ಷೆಯಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇವೆ. ಈ ಪತ್ರದೊಂದಿಗೆ ರೆಡ್ ಕ್ರಾಸ್ ಪರೀಕ್ಷೆಯ **ಸುತ್ತೋಲೆ / ಕರ ಪತ್ರವನ್ನು** ತಮಗೆ ಮಾಹಿತಿಗಾಗಿ ಲಗತ್ತಿಸಿದೆ.

ವಂದನೆಗಳೊಂದಿಗೆ,

(Shilpa) SD.

ತಮ್ಮ ವಿಶ್ವಾಸಿ,

ಉಮಾಕಾಂತ್
ಪ್ರಧಾನ ಕಾರ್ಯದರ್ಶಿ(ಪ್ರಭಾರ)

JD/Academic

Recd
03/11/2025

4/11/25

04/11/25



DOC-117

Ph: 080 – 22264205
E -mail: jrcexam12@gmail.com

# ಭಾರತೀಯ ರೆಡ್ ಕ್ರಾಸ್ ಸಂಸ್ಥೆ

**(CONSTITUTED UNDER PARLIAMENT ACT XV OF 1920)**

**ಕರ್ನಾಟಕ ರಾಜ್ಯ ಶಾಖೆ**

**# 26, ರೆಡ್ ಕ್ರಾಸ್ ಭವನ, ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.**

## "ಕಿರಿಯ ರೆಡ್ ಕ್ರಾಸ್"

### ರಾಜ್ಯ ಮಟ್ಟದ ರೆಡ್ ಕ್ರಾಸ್ ಪರೀಕ್ಷೆ ಶನಿವಾರ 6ನೇ ಡಿಸೆಂಬರ್ 2025 ರಂದು ನಡೆಸಲಾಗುವುದು.

1. ಕರ್ನಾಟಕ ರಾಜ್ಯಾದ್ಯಂತ ರೆಡ್ ಕ್ರಾಸ್ ಪರೀಕ್ಷೆಯನ್ನು 06/12/2025ರಂದು ಬೆಳಗ್ಗೆ 10:30 ರಿಂದ 11:30 ರವರೆಗೆ ನಡೆಸಲಾಗುತ್ತದೆ. ಪ್ರೌಢ ಶಾಲೆಯ 8, 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವ್ಯಾಸಂಗ ಮಾಡುತ್ತಿರುವ ಕಾಲೇಜು ವಿದ್ಯಾರ್ಥಿಗಳು ಈ ಪರೀಕ್ಷೆಗೆ ಅರ್ಹರಾಗಿರುತ್ತಾರೆ. ಪ್ರಸ್ತುತ ವರ್ಷ ಭಾರತೀಯ ರೆಡ್ ಕ್ರಾಸ್ ಕರ್ನಾಟಕ ರಾಜ್ಯ ಶಾಖೆಯಿಂದ ಓ.ಎಂ.ಆರ್. ಮಾದರಿ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಿದೆ.
2. ಓ.ಎಂ.ಆರ್ ಉತ್ತರ ಪತ್ರಿಕೆಯು ಆಂಗ್ಲ ಮಾಧ್ಯಮದಲ್ಲಿ ಮುದ್ರಿತಗೊಂಡಿದ್ದು, a,b,c & d ಎಂಬ 04 ಆಯ್ಕೆಯ ಉತ್ತರಗಳನ್ನು ನೀಡಲಾಗಿದೆ, ಅದರಲ್ಲಿ ಒಂದನ್ನು ಶೇಡ್ ಮಾಡಬೇಕಾಗಿರುತ್ತದೆ. ಪರೀಕ್ಷೆಯಲ್ಲಿ ಶೇ.35%ರಷ್ಟು ಅಂಕ ಪಡೆದವರು ಉತ್ತೀರ್ಣರಾದವರೆಂದು ಘೋಷಿಸಲಾಗುವುದು. ಈ ಪರೀಕ್ಷೆಯಲ್ಲಿ 90 ಅಂಕಗಳಿಗೆ ಬಹು ಆಯ್ಕೆ ಪ್ರಶ್ನೆಗಳಿದ್ದು, 4 ಉತ್ತರಗಳನ್ನು ನೀಡಲಾಗಿದೆ. ಈ ನಾಲ್ಕು ಆಯ್ಕೆಗಳಲ್ಲಿ ಒಂದನ್ನು ಉತ್ತರವಾಗಿ ಆಯ್ಕೆ ಮಾಡಬೇಕಾಗಿರುತ್ತದೆ. ಈ ಪರೀಕ್ಷೆಯನ್ನು ಕಪ್ಪು ಅಥವಾ ನೀಲಿ ಬಾಲ್ ಪೆನ್‌ನಿಂದ ಶೇಡ್ ಮಾಡುವುದು. ಉಳಿದ 10 ಅಂಕಗಳಿಗೆ ಕೌನ್ಸಿಲರ್ಸ್ ಮೌಲ್ಯಮಾಪನ (JRC Counsellor - High School/PU College Teacher) ಒಳಗೊಂಡಿರುತ್ತದೆ. ಸದರಿ ಓ.ಎಂ.ಆರ್.ನಲ್ಲಿ 04 ಆಯ್ಕೆ ನೀಡಲಾಗಿರುತ್ತದೆ. ಇದರಲ್ಲಿ 1 ಆಯ್ಕೆಗೆ ಜೆ.ಆರ್.ಸಿ. ಕೌನ್ಸಿಲರ್ ರವರು ಮಕ್ಕಳ ನಡತೆ, ಕಲಿಕೆಯ ಪ್ರಗತಿ ಇನ್ನಿತರೆ ಮಾನದಂಡದ ಆಧಾರದ ಮೇಲೆ ಮೌಲ್ಯಮಾಪನ ಮಾಡಿ ಆಯ್ಕೆ ಮಾಡಬೇಕು.
3. ಈ ಪರೀಕ್ಷೆಯು ರೆಡ್‌ಕ್ರಾಸ್‌ನ ಇತಿಹಾಸ, ಉದ್ದೇಶಗಳು, ಕಾರ್ಯಚಟುವಟಿಕೆಗಳು, ಕಿರಿಯ ಮತ್ತು ಯುವ ರೆಡ್‌ಕ್ರಾಸ್, ಜಿನೇವಾ ಒಪ್ಪಂದ, ಅಂತರರಾಷ್ಟ್ರೀಯ ರೆಡ್‌ಕ್ರಾಸ್, ಭಾರತೀಯ ರೆಡ್‌ಕ್ರಾಸ್, ರಸ್ತೆ ಸುರಕ್ಷತೆ, ರಕ್ತದಾನ, ವಿಪತ್ತು ನಿರ್ವಹಣೆ ಮತ್ತು ಪರಿಹಾರ, ಜೀವನ ಕೌಶಲ್ಯಗಳು, ಪ್ರಥಮ ಚಿಕಿತ್ಸೆಯ ಸರಳ ಪ್ರಶ್ನೆಗಳು, ಸಾಮಾನ್ಯ ಜ್ಞಾನ (ಮಾದಕ ವಸ್ತುಗಳ ಸೇವನೆ, ಏಡ್ಸ್, ಕ್ಯಾನ್ಸರ್, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ಸಂವಿಧಾನ) ಮುಂತಾದ ವಿಷಯಗಳಿಗೆ ಸಂಬಂಧಪಟ್ಟಿರುತ್ತದೆ. ಈ 90 ಅಂಕಗಳ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದಲ್ಲಿರುತ್ತದೆ.
4. ರೆಡ್ ಕ್ರಾಸ್ ಪರೀಕ್ಷೆಗೆ ಆಂಗ್ಲ ಮತ್ತು ಕನ್ನಡ ರೆಡ್ ಕ್ರಾಸ್ ಪುಸ್ತಕದ ಪಿ.ಡಿ.ಎಫ್ ಪ್ರತಿಯನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಅಧಿಕೃತ ಜಾಲತಾಣ : www.redcrosskarnataka.org ಇದರ JUNIOR RED CROSS PAGE ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಆಸಕ್ತಿಯಿರುವ ವಿದ್ಯಾರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ..
   ತಮಗೆ ಭೌತಿಕ ಪುಸ್ತಕಗಳ ಅವಶ್ಯಕತೆ ಇದ್ದಲ್ಲಿ ತಾವು ಪ್ರತಿ ಪುಸ್ತಕಕ್ಕೆ ಮುಂಗಡವಾಗಿ **ರೂ.25/– (ಇಪ್ಪತ್ತೈದು ರೂಪಾಯಿಗಳು ಮಾತ್ರ)** ರಾಜ್ಯ ಶಾಖೆಗೆ ಪಾವತಿಸಿ ಪಡೆಯಬಹುದಾಗಿದೆ.
5. ಒಬ್ಬ ಅಭ್ಯರ್ಥಿಗೆ ಪರೀಕ್ಷಾ ಶುಲ್ಕ ರೂ: 40/– (ನಲವತ್ತು ರೂಪಾಯಿಗಳು) ಮಾತ್ರ ಆಗಿರುತ್ತದೆ.
6. ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ರೆಡ್ ಕ್ರಾಸ್ ಪ್ರಮಾಣ ಪತ್ರ ನೀಡಲಾಗುವುದು.
7. ಪರೀಕ್ಷೆಗೆ ನೊಂದಾಯಿಸುವ ಎಲ್ಲಾ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪರೀಕ್ಷಾ ಕೇಂದ್ರವನ್ನಾಗಿ ಮಾಡಲಾಗುವುದು. ಇಂತಹ ಕೇಂದ್ರಗಳ ಪರೀಕ್ಷೆ ನಡೆಸುವ ಮೇಲ್ವಿಚಾರಕರ ಗೌರವಧನವನ್ನು ಮತ್ತು ಪರೀಕ್ಷಾ ವ್ಯವಸ್ಥಾಪನಾ ವೆಚ್ಚವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ನಿಯಮಗಳಂತೆ ಭರಿಸಲಾಗುವುದು. 30ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಂತಹ ಶಾಲೆ/ಪದವಿ ಪೂರ್ವ ಕಾಲೇಜನ್ನು ಸಹ ಪರೀಕ್ಷಾ ಕೇಂದ್ರವಾಗಿ ಪರಿಗಣಿಸಲಾಗುವುದು. ಆದರೆ ಈ ಶಾಲೆಗಳ/ಪದವಿ ಪೂರ್ವ ಕಾಲೇಜುಗಳ ಮೇಲ್ವಿಚಾರಕರಿಗೆ ನಿಯಮದಂತೆ ನಿಗದಿಪಡಿಸಿರುವ ಗೌರವಧನದ ಶೇಕಡ 50%ರಷ್ಟನ್ನು ಮಾತ್ರ ನೀಡಲಾಗುವುದು.
8. ಒಂದು ಬಾರಿ ಪರೀಕ್ಷೆ ಶುಲ್ಕ ಪಾವತಿ ಮಾಡಿದ ನಂತರ ಅದನ್ನು ಹಿಂದಿರುಗಿಸಲಾಗುವುದಿಲ್ಲ.
9. 30ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರುಪಡಿಸುತ್ತಿರುವ ಶಾಲಾ ಮುಖ್ಯಸ್ಥರು/ ಕಾಲೇಜು ಮುಖ್ಯಸ್ಥರು ಯಾರಾದರೊಬ್ಬ ಶಿಕ್ಷಕರ ಹೆಸರನ್ನು ಪರೀಕ್ಷಾ ಸೂಚಕರಾಗಿ ಆಯ್ಕೆ ಮಾಡಿ ಕಡ್ಡಾಯವಾಗಿ ಕಳುಹಿಸಬೇಕು. 60ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರುಪಡಿಸುತ್ತಿರುವ ಶಾಲೆ/ಕಾಲೇಜುಗಳು ಇಬ್ಬರು ಶಿಕ್ಷಕರ ಹೆಸರನ್ನು ಪರೀಕ್ಷಾ ಸೂಚಕರಾಗಿ ಆಯ್ಕೆ ಮಾಡಿ ಅವರ ಸಂಪರ್ಕದ ಮೊಬೈಲ್ ಸಂಖ್ಯೆಯನ್ನು ಹಾಗೂ ಮಿಂಚಂಚೆ **(E-mail)** ಯನ್ನು ತಪ್ಪದೇ ನಮೂದಿಸಬೇಕು.
10. ಜೂನಿಯರ್ ರೆಡ್ ಕ್ರಾಸ್ ಪರೀಕ್ಷಾ ಶುಲ್ಕ ಹಾಗೂ ಪುಸ್ತಕ ಶುಲ್ಕದ ಪಾವತಿಗೆ ಸಂಬಂಧಿಸಿ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಲಾಗಿದೆ. ಸಾಫ್ಟ್‌ವೇರ್ ಬಳಸಿ ಪ್ರೌಢಶಾಲೆಗಳು/ಪದವಿ ಪೂರ್ವ ಕಾಲೇಜುಗಳು ಈ ಮೇಲ್ಕಂಡ ಪರೀಕ್ಷಾ/ಪುಸ್ತಕ ಶುಲ್ಕಗಳನ್ನು ವೆಬ್ ಸೈಟ್ ಲಿಂಕ್: www.redcrosskarnataka.org ಯ ಮೂಲಕ ಪಾವತಿಸಬಹುದಾಗಿದೆ.

- ಜೂನಿಯರ್ ರೆಡ್ ಕ್ರಾಸ್ ಸಾಫ್ಟ್‌ವೇರ್/ವೆಬ್ ಅಪ್ಲಿಕೇಶನ್ಸ್ ವಿಳಾಸ:- www.redcrosskarnataka.org ಗೂಗಲ್ ಮೂಲಕ ಈ ಮೇಲ್ ಲಿಂಕ್/ಕೊಂಡಿಯನ್ನು ಬಳಸಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಅಧಿಕೃತ ವೆಬ್‌ಸೈಟ್‌ಗೆ ಲಾಗಿನ್ ಮಾಡಬೇಕು.
- ಅಧಿಕೃತ ವೆಬ್‌ಸೈಟ್‌ಗೆ ಲಾಗಿನ್ ಆದ ನಂತರ ಬಲ ಬದಿಯ ಮೇಲಿನ ತುದಿಯಲ್ಲಿ JRC Registration ಎಂಬ ಆಯ್ಕೆಯನ್ನು ನೀಡಲಾಗಿದೆ, ಈ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು.
- ಈ ಆಯ್ಕೆಯನ್ನು ಆಯ್ದುಕೊಂಡ ನಂತರ 4 ಆಯ್ಕೆಗಳು ತೆರೆದುಕೊಳ್ಳುತ್ತವೆ 1. School Registration 2. P.U College Registration 3. JRC Examination/Program 4. JRC 2024-25-Result
- JRC Examination/Program ಈ ಆಯ್ಕೆಯನ್ನು ಆಯ್ದುಕೊಂಡ ನಂತರ 4 ಆಯ್ಕೆಗಳು ತೆರೆದುಕೊಳ್ಳುತ್ತವೆ. ಅದರಲ್ಲಿ ಆಯ್ಕೆ 1. JRC Examination High School ಆಯ್ಕೆ 2. JRC Examination PU College (ಇನ್ನೆರಡು ಆಯ್ಕೆಗಳು ಪರೀಕ್ಷಾ ಫಲಿತಾಂಶಕ್ಕೆ ಸಂಬಂಧಿಸಿದೆ)
- ಪ್ರೌಢ ಶಾಲೆಗಳು ಮೊದಲನೇ ಆಯ್ಕೆಯಾದ JRC Examination-High School ಮಾತ್ರ ಆಯ್ದುಕೊಳ್ಳಬೇಕು.
- ಪದವಿ ಪೂರ್ವ ಕಾಲೇಜುಗಳು ಎರಡನೇ ಆಯ್ಕೆಯಾದ JRC Examination-PU College ಮಾತ್ರ ಆಯ್ದುಕೊಳ್ಳಬೇಕು.
- ಸಂಬಂಧಪಟ್ಟ ಆಯ್ಕೆ ನಂತರ ಪರೀಕ್ಷಾ ಶುಲ್ಕ ಹಾಗೂ ಪುಸ್ತಕದ ಶುಲ್ಕ ಪಾವತಿಯ ನಮೂನೆಯು ತೆರೆದುಕೊಳ್ಳುತ್ತದೆ. ನಮೂನೆ (Application-format) ಯಲ್ಲಿ ಪ್ರೌಢ ಶಾಲೆಗಳು ಡೈಸ್ ಕೋಡ್ (ಉದಾ: 29140513004) ಹಾಗೆಯೇ ಪದವಿ ಪೂರ್ವ ಕಾಲೇಜುಗಳು ತಮ್ಮ ಕಾಲೇಜು ಕೋಡ್ ಬಳಸಿ (ಉದಾ: VV0009) ನೋಂದಾಯಿಸಿಕೊಳ್ಳಬೇಕು (ಖಡ್ಡಾಯವಾಗಿ ಎಲ್ಲಾ Column ಭರ್ತಿಮಾಡಬೇಕು).
- ಎಲ್ಲಾ Column ಭರ್ತಿಮಾಡಿದ ನಂತರ ಕೊನೆಯಲ್ಲಿ PAY NOW ಆಯ್ಕೆಯನ್ನು ಆಯ್ದುಕೊಳ್ಳಬೇಕು, Phone Pay & UPI Scanner ಬಳಸಿ ಪಾವತಿ ಮಾಡಬಹುದು. ಒಂದು ವೇಳೆ ಸ್ಕ್ಯಾನರ್ ಮುಖಾಂತರ ಪಾವತಿಸಲು ಸಾಧ್ಯವಾಗದಿದ್ದಲ್ಲಿ ಸ್ಕ್ಯಾನರ್ ಪಕ್ಕದಲ್ಲಿಯೇ ಕಾಣುವ ರೆಡ್ ಕ್ರಾಸ್ ಬ್ಯಾಂಕ್ ಖಾತೆಗೆ ಶಾಲೆ/ಕಾಲೇಜು ಬ್ಯಾಂಕ್ ಖಾತೆ ಬಳಸಿ NEFT ಮಾಡಿ, ದಾಖಲೆಯನ್ನು ಅಲ್ಲಿ ಒದಗಿಸಲಾಗಿರುವ Select Payment Mode ಆಯ್ಕೆಯನ್ನು ಬಳಸಿ ಅಪ್ ಲೋಡ್ ಮಾಡಲು ಅವಕಾಶ ನೀಡಲಾಗಿದೆ.
  ಶುಲ್ಕ ಪಾವತಿ ಮಾಡಿದರೆ ಮಾತ್ರ ವಿದ್ಯಾರ್ಥಿಗಳ ಪಟ್ಟಿ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತದೆ.
- ಎಲ್ಲಾ ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳು ಪರೀಕ್ಷಾ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪಟ್ಟಿಯನ್ನು **ದಿನಾಂಕ: 30/11/2025** ರೊಳಗೆ ನಮ್ಮ ಕಛೇರಿ ವೆಬ್ ಸೈಟ್: www.redcrosskarnataka.org ಮುಖಾಂತರ ಅಪ್ ಲೋಡ್ ಮಾಡುವುದು.
- ಪಾವತಿಯು ಯಶಸ್ವಿಯಾದ ತಕ್ಷಣವೆ ಪ್ರೌಢಶಾಲೆಗಳು/ಪದವಿ ಪೂರ್ವ ಕಾಲೇಜುಗಳು ನೀಡಿದ ಇ-ಮೇಲ್ ಐಡಿಗೆ/ ಜೂನಿಯರ್ ರೆಡ್ ಕ್ರಾಸ್ ಕೌನ್ಸಿಲರ್‌ರವರ ಇ-ಮೇಲ್ ಐಡಿಗೆ ಹಾಗೂ ಭಾರತೀಯ ರೆಡ್ ಕ್ರಾಸ್ ಈ ಮೇಲ್ ವಿಳಾಸಕ್ಕೆ ದೃಢೀಕೃತ ರಶೀದಿ ಮತ್ತು ಅಭಿನಂದನಾ ಪತ್ರ ಬರುತ್ತದೆ. ಸದರಿ ದಾಖಲೆಗಳನ್ನು ಆಡಿಟ್ ಅಥವಾ ಇನ್ನಿತರ ಉದ್ದೇಶಗಳಿಗೆ ಬಳಸಿಕೊಳ್ಳಬಹುದು.
- ಯಶಸ್ವಿ ಪಾವತಿಯ ನಂತರ ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳ ಹೆಸರನ್ನು ಆಂಗ್ಲ ಭಾಷೆಯಲ್ಲಿ ನಮೂದು ಮಾಡಲು ಎಂ.ಎಸ್. ಎಕ್ಸೆಲ್ ಪರದೆ ತೆರೆದುಕೊಳ್ಳುತ್ತದೆ. ಆದಾದ ನಂತರ ವಿದ್ಯಾರ್ಥಿಗಳ ಹೆಸರು, ಪೋಷಕರ/ತಂದೆಯ ಹೆಸರು, ತರಗತಿ (8th, 9th, 10th, I PUC & II PUC) ಮೊಬೈಲ್ ಸಂಖ್ಯೆಯೊಂದಿಗೆ ಬೆರಳಚ್ಚು ಮಾಡಿ ಅಪ್‌ಲೋಡ್ ಮಾಡಬಹುದು (ಎಂ.ಎಸ್.ಎಕ್ಸೆಲ್ ನಲ್ಲಿ ಮಾತ್ರ - CAPITAL LETTERS). Upload on JRC Examination/Program High School or PU College Application upper corner of our website.
- ಈ ಬಾರಿಯೂ ಸಹ 3 ಹಂತದಲ್ಲಿ ಪ್ರಶ್ನೆ ಪತ್ರಿಕೆಯನ್ನು ಹಂಚಿಕೆ ಮಾಡಲಾಗುವುದು. (ಹಂತ-1-8ನೇ ತರಗತಿ) (ಹಂತ-2 09 ಮತ್ತು 10ನೇ ತರಗತಿ) (ಹಂತ-3 ಪ್ರಥಮ ಮತ್ತು ದ್ವಿತೀಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ)
- ಪರೀಕ್ಷೆ ತೆಗೆದುಕೊಂಡ ಎಲ್ಲಾ ಪ್ರೌಢಶಾಲೆಗಳು/ಪಿಯು ಕಾಲೇಜುಗಳು ಲಕೋಟೆಯ ಮೇಲೆ ನಾವು ಉಲ್ಲೇಖಿಸಿರುವ ಕ್ರಮ ಸಂಖ್ಯೆಯನ್ನು ಶಾಲಾ ಡೈಸ್ ಕೋಡ್ /ಕಾಲೇಜು ಕೋಡ್ ಗಳೊಂದಿಗೆ ನಮೂದಿಸಬೇಕು.
- ಒಂದೇ ಕಟ್ಟಡ/ಆವರಣದಲ್ಲಿರುವ ಪ್ರೌಢಶಾಲೆ ಮತ್ತು ಪಿ.ಯು. ಕಾಲೇಜುಗಳು ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಬೇರೆ ಬೇರೆ ಲಕೋಟೆಯಲ್ಲಿ ಉಲ್ಲೇಖಿತ ಕ್ರಮ ಸಂಖ್ಯೆ ಹಾಗೂ ಶಾಲೆ/ಕಾಲೇಜು ಡೈಸ್ ಕೋಡ್ ನಮೂದಿಸಿ ಕಳುಹಿಸುವುದು.
- ಪರೀಕ್ಷೆ ಮುಗಿದ ನಂತರ ಸಂಬಂಧಪಟ್ಟ ವಿದ್ಯಾಸಂಸ್ಥೆಗಳು ಉತ್ತರ ಪತ್ರಿಕೆಗಳನ್ನು ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ನಂ.26, ರೆಡ್ ಕ್ರಾಸ್ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001 ಈ ವಿಳಾಸಕ್ಕೆ ತಪ್ಪದೇ ಒಂದು ವಾರದ ಒಳಗಾಗಿ ತಲುಪುವಂತೆ ಕಳುಹಿಸಿಕೊಡುಲು ಕೋರಿದೆ.

ಟಿಪ್ಪಣಿ: ಸಾಫ್ಟ್‌ವೇರ್/ವೆಬ್ ಅಪ್ಲಿಕೇಶನ್ಸ್ ಮೂಲಕ ಪಾವತಿ ಮಾಡುವ ಬಗ್ಗೆ ಯಾವುದೇ ಸಹಾಯಕ್ಕಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜೂನಿಯರ್ ರೆಡ್ ಕ್ರಾಸ್ ವಿಭಾಗದ ದೂ:-080-22264205 ಅಥವಾ ಈ-ಮೇಲ್ ವಿಳಾಸ:- jrcexam12@gmail.com ಗೆ ಕಛೇರಿ ಅವಧಿಯಲ್ಲಿ (ಬೆಳಿಗ್ಗೆ ಘಂಟೆ: 10:00 ರಿಂದ ಸಂಜೆ 5:30 ರವರೆಗೆ) ಸಂಪರ್ಕಿಸುವುದು ಹಾಗೂ ಸಹಾಯಕ್ಕಾಗಿ

**ಶ್ರೀ ಹರೀಶ್. ಎಂ ಮೊ. ಸಂ: 96321 40642,**
**ಶ್ರೀಮತಿ ಸಬೀನ ಬೇಗಂ: 87926 17214,**
**ಶ್ರೀ ಅಭಿಷೇಕ್.ಎನ್. 97421 90884**

ಉಮಾಕಾಂತ್
ಪ್ರಧಾನ ಕಾರ್ಯದರ್ಶಿ (ಪ್ರಭಾರ)

Ph: 080 – 22264205
E -mail: jrcexam12@gmail.com

# Indian Red Cross Society

**(CONSTITUTED UNDER PARLIAMENT ACT XV OF 1920)**

**KARNATAKA STATE BRANCH**

26, Red Cross Bhavan, First Floor, Race Course Road, Bengaluru – 560 001

# "JUNIOR RED CROSS"

**STATE LEVEL RED CROSS EXAMINATION** Being held on Saturday, the 6th December 2025.

1. Red Cross Examination is being conducted on **06/12/2025 from 10:30 a.m to 11:30 a.m.** throughout Karnataka State. Students studying in the 8th, 9th and 10th standards and 1st PUC and 2nd PUC (Pre University College Students) are eligible to appear for the examination. This year our organization is conducting OMR based Examination.
2. The Answer will be marked on OMR Sheet English like a, b, c & d options students should shade in one OMR. A minimum of 35% marks has to be obtined to declare a candidate as pass. Total 90 multiple choice question will be provided and 4 options for every question to shade one answer on OMR Sheet. Candidate can mark answer by using Black or Blue Ball Pen only. And remaining 10 marks for JRC counsellor assessment (High School/PU ColllegeTeacher) to shade one option on OMR Sheet (on the basis of student behaviour, learning performance and participating in extracurricular activities).
3. **The questions contain to origin, aims and activities of Red Cross, Geneva Convention, International Red Cross, Importance of Indian Red Cross, Disaster Management & Preparedness, Life Skills, Road Safety, Blood Donation, (Junior & Youth Red Cross), simple questions on First Aid, Interpersonal relations, General Knowledge Like Drug Addiction, Aids, Cancer, Science and Technology, Indian Constitution etc. For this belongs to 90 questions will be Kannada and English both languages.**
4. The book "Junior Red Cross Hand Book" in English & Kannada is the prescribed book for reference. The PDF Copy is already uploaded on our official website: www.redcrosskarnataka.org at JUNIOR RED CROSS PAGE.
   The hard copy of the book Priced at **Rs. 25.00 PER** COPY is avaialable. It may be obtained from the Indian Red Cross Society, No.26, Red Cross Bhavan, Ist Floor, Race Course Road, Bengaluru – 560 001. BOOKS WILL BE SENT BY POST IF PAYMENT IS MADE IN ADVANCE. The number of books in Kannada and English required must be mentioned clearly. THESE BOOKS WILL NOT BE SUPPLIED ON CREDIT or FREE OF COST basis.
5. The admission fee for examination is **Rs.40/- (Rupees Forty only)** per candidate.
6. All successful candidates (Passed Students) will be sent the Red Cross Certificates.
7. **Any high school which offers 30 candidates or more will be considered as a center for examination. Expenditure incurred for conducting the examination, Invigilation work, etc. will be paid by the Indian Red Cross Society, Karnataka State Branch as per the rates decided by the state branch.**
   **IF THE CANDIDATES ARE LESS THAN 30 STUDENTS, THE SCHOOL CAN BE CONSIDERED AS CENTRE FOR EXAMINATION, WHEREIN THE RESPECTIVE TEACHERS WILL BE PAID 50% REMUNERATION ONLY FOR THE EXAMINATION WORK.**
8. The Examination Fee is non- refundable.
9. The Heads of the Institutions registering 30 candidates are requested to recommend the name of one teacher for being appointed as Examiner. Institutions offering 60 or more candidates are requested to recommend the names of 02 (Two) teachers, duly mentioning contact telephone/cell numbers & E-mail IDs etc.
10. Software is available to facilitate payment of High School/PU Colleges examination fee and book fee related to Junior Red Cross. The above fees can be paid by the High Schools/PU Colleges using the software. **(DD, Cheque/Cash /EMO are not accepted)**

- Junior Red Cross Software/Web Application Address:- www.redcrosskarnataka.org Login to the official website of Indian Red Cross, Karnataka State Branch, using the above link/Code via Google. After logging in to the official website, an option is given at the upper right corner of the website called "JRC REGISTRATION", click on this option
- After selecting this option 4 other options will open-1. School registration 2. P.U College Registration . 3. JRC Examination/Program 4. JRC 2024-25-Result
- After selecting this JRC Examination/Program 4 other options will open 1. JRC Examination High School 2. JRC Examination PU College (other 2 options related to Results)
- High schools should choose the 1st option, JRC Examination School. PU colleges should choose for the 2nd option JRC Examination PU College
- After the relevant selection, the exam fee and book fee payment form will open.
- High schools should register using DICE code (eg.29140513004) and pre-graduation colleges using college code (eg.VV0009) all coloumns must be filled in the form.
- After filling all the options, at the end, you have to select the option PAYNOW, Payment can be made using Phone Pay or UPI Scanner. If not possible to pay through the scanner, pay by NEFT to our official account details shown on beside the scanner & NEFT Details can upload in the payment mode option in our official website itself.
- After Payment only can possible to upload student list.
- All high Schools & PU Colleges should enter or upload their student List on our website: www.redcrosskarnataka.org on or before 30/11/2025
- After successful payment, confirmation receipt and congratulatory letter will be sent to the e-mail id's furnished by the High Schools/PU Colleges/Junior Red Cross Counselor and Indian Red Cross e-mail address. Such records may be used for audit or other purposes.
- After successful payment screen will open you can download one excel file their you need to enter students Name, Guardian/Father Name (ENGLISH CAPITAL LETTERS) & Phone Number along with the class ($8^{th}$, $9^{th}$, $10^{th}$, $1^{st}$ PUC and $2^{nd}$ PUC) who are taking the exam and upload on JRC Examination/Program- High School or PU College Application Upper Corner of our website.
- If there is any difficulty to enter the names of the students & Guardian Name it can typed in MS Excel and upload it. (ENGLISH CAPITAL LETTERS)
- The Question paper will be distrubuted in 3 Levels (Level - 1 for 8th Std.) (Level - 2 for 9th & 10th Std.) & (Level - 3 for PU Students)
- All High Schools/PU Colleges which have taken the examination should mention the Serial Number which we have mentioned on the Envelop along with School Dice Code /College Codes.
- PU Colleges and High Schools which are in same premises should sent separately School Answer scripts separate and PU Answer Scripts so as to go for proper segregation.
- After completion of the examination, answer scripts sent to The General Secretary, Indian Red Cross Society, Karnataka State Branch, No.26, Race Course Road, Bangalore-560 001, the answer scripts should reach our office within one week from the date of Examination

**Note: Please feel free to contact the number below for any further clarification Tel:-080-22264205 or Email Address:- jrcexam12@gmail.com in office hours between 10.am to 5:30pm or contact**

**Sri Harish. M., Mob No: 9632140642,**

**Smt. Sabeena Begum, Mob No.: 87926 17214,**

**Sri Abhishek N., Mob No.: 97421 90884.**

**Umakant**
**General Secretary (I/C) IRCS, KSB**